


ಅವರಿಗೆ ಸೂಚನೆ ಕೊಡೋಣ್ವ?' ಕನಕಾದೇವಿ ಕೇಳಿದ್ದಕ್ಕೆ, 'ಈಗಿನ ಹುಡುಗರಲ್ವಾ, ಕಾದು ನೋಡೋಣ ಅನ್ಸುತ್ತೆ ನಂಗೆ' ಅಂದವರು ಲ್ಯಾಪ್ ಮುಚ್ಚಿದರು. ಸಾಯಂಕಾಲ ಶೆಟ್ಟರ ಮನೆಗೆ ಇಬ್ಬರೂ ಹೋದರು. 'ಶೆಟ್ರೇ... ಹೂವು ಹಸಿ ಕಸ. ಅದನ್ನ ಪಾರ್ಕಿಂಗ್ ಜಾಗದಲ್ಲೇಕೆ ಇಟ್ಟು ಬರೋದು ನೀವು?' ಅಂದದ್ದಕ್ಕೆ ತಾವಲ್ಲವೇ ಅಲ್ಲ ಅಂತ ಪ್ರತಿಭಟಿಸಿದರು. ಮಧ್ಯಾಹ್ನ ಮೂರುಗಂಟೆ ಫೋಟೊ ಇದೆ, ತೋರಿಸೋಣ ಬೇಕಿದ್ರೆ ಅಂದಾಗ ಮೆತ್ತಗಾಗಿ ಅದು ತಿರುಪತಿ ದೇವರ ಪೂಜೆ ಮಾಡಿದ ಪ್ರಸಾದವೆಂದೂ ಅದನ್ನ ಹತ್ತಾರು ಜನರ ಎಂಜಲು ಮುಸುರೆ, ಮಾಂಸ ಮೊಟ್ಟೆ ಎಸೆಯುವ ಡ್ರಮ್ಮಿಗೆ ಗೊತ್ತಿದ್ದೂ ಹಾಕಿದರೆ ಪಾಪ ಸುತ್ತಿಕೊಳ್ಳುತ್ತದೆ. ತಮ್ಮಿಂದ ಸಾಧ್ಯವಿಲ್ಲ ಅಂತ